ಲೋಕಧ್ವನಿ
ಸಾಮೀಪ್ಯವೇ ಆಪ್ತ

# ಎಲೆಕ್ಟ್ರಿಕ್ ವಾಹನ ಬಳಕೆ ಪ್ರಮಾಣ ಅಧಿಕಗೊಳಿಸುವುದು ಅಗತ್ಯ

## ಕಚ್ಚಾ ತೈಲ ಆಮದು ಮುಕ್ತ ಭಾರತ ಮಾಡೋಣ
## ಕಾರ್ಯಾಗಾರದಲ್ಲಿ ಗಣಪತಿ ಸೋಡಿಗದ್ದೆ ಹೇಳಿಕೆ

**ಹಳಿಯಾಳ:** ಎಲೆಕ್ಟ್ರಿಕ್ ವಾಹನ ಬಳಕೆ ಪ್ರಮಾಣ ಅಧಿಕಗೊಳಿಸಿ ಭಾರತವನ್ನು ಕಚ್ಚಾ ತೈಲ ಆಮದು ಮುಕ್ತ ರಾಷ್ಟ್ರವನ್ನು ಮಾಡೋಣ ಎಂದು ಬೆಂಗಳೂರಿನ ಈಜೋನ್ ಸಂಸ್ಥೆಯ ಮಾಲಿಕ ಗಣಪತಿ ಸೋಡಿಗದ್ದೆ ಹೇಳಿದರು.

ಇಲ್ಲಿನ ಕೆಎಲ್ಎಸ್ ವಿಡಿಐಟಿಯಲ್ಲಿ ಶುಕ್ರವಾರ ಜರುಗಿದ ಎಲೆಕ್ಟ್ರಿಕ್ ವಾಹನ ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಮುಂದಿನ 10 ವರ್ಷಗಳಲ್ಲಿ ಭಾರತವು ಸಂಪೂರ್ಣವಾಗಿ ಎಲೆಕ್ಟ್ರಿಕ್ ವಾಹನವನ್ನು ಬಳಸುವ ಗುರಿ ಹೊಂದಿದೆ. ದಿನದಿಂದ ದಿನಕ್ಕೆ ಭಾರತದಲ್ಲಿ ಎಲೆಕ್ಟ್ರಿಕ್ ವಾಹನದ ಉತ್ಪಾದನೆ ಹಾಗೂ ಮಾರಾಟ ಹೆಚ್ಚಾಗುತ್ತಿದ್ದು, ಕಚ್ಚಾ ತೈಲದ ಆಮದು ಪ್ರಮಾಣವನ್ನು ಇಳಿಕೆ ಮಾಡಲಿದೆ ಎಂದು ಹೇಳಿದರು. ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇಲೆಕ್ಟ್ರಿಕ್ ವಾಹನ ತಯಾರಿಕಾ ಸಂಸ್ಥೆಗಳಲ್ಲಿ ವಿಫುಲ ಅವಕಾಶಗಳಿವೆ ಎಂದು ಹೇಳಿದರು.

ಮೂಲತಃ ಭಟ್ಕಳದವರಾದ ಗಣಪತಿ ಅವರು ಎಲೆಕ್ಟ್ರಿಕ್ ವಾಹನ ಕ್ಷೇತ್ರದಲ್ಲಿನ ತಮ್ಮ 22 ವರ್ಷಗಳ ಸುದೀರ್ಘ ಅನುಭವವನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ ವಿದ್ಯಾರ್ಥಿಗಳು ಎಲೆಕ್ಟ್ರಿಕ್ ವಾಹನದ ಕುರಿತಾದ ಪ್ರಮಾಣಿಕೃತ ಕೋರ್ಸ್ ಮಾಡಿಕೊಂಡು ಉದ್ಯೋಗಾವಕಾಶ ಗಳಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.



ಹಳಿಯಾಳದ ಕೆಎಲ್ಎಸ್ ವಿಡಿಐಟಿಯಲ್ಲಿ ಜರುಗಿದ ಕಾರ್ಯಾಗಾರದಲ್ಲಿ ಗಣಪತಿ ಸೋಡಿಗದ್ದೆ ಮಾತನಾಡಿದರು.

ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ ವಿಭಾಗದ ಮುಖ್ಯಸ್ಥ ಪ್ರೊ. ಅಲ್ಲಮಪ್ರಭು ಕೊಳಕಿ ಸ್ವಾಗತಿಸಿದರು. ಆವಿಷ್ಕಾರ ಪರಿಷತ್ತಿನ ಅಧ್ಯಕ್ಷರಾದ ಡಾ. ಮಹೇಂದ್ರ ದೀಕ್ಷಿತ್ ಮತ್ತು ಪ್ರೊ. ರವೀಂದ್ರ ಮೋಟೇಕರ್ ಕಾರ್ಯಕ್ರಮ ಸಂಯೋಜಿಸಿದ್ದರು. ವೈಷ್ಣವಿ ಅಂಬಡಗಟ್ಟಿ ನಿರೂಪಿಸಿ ವಂದಿಸಿದರು.

ಮಹಾವಿದ್ಯಾಲಯದ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ವಿಭಾಗ ಹಾಗೂ ಆವಿಷ್ಕಾರ ಪರಿಷತ್ತು ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 70ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಲೆಕ್ಟ್ರಿಕ್ ವಾಹನ ಕ್ಷೇತ್ರದಲ್ಲಿನ ಆಧುನಿಕ ಬದಲಾ ವಣೆಗಳು ಹಾಗೂ ಅವಕಾಶಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲು ಈ ಕಾರ್ಯಗಾರ ಆಯೋಜಿಸಲಾಗಿತ್ತು ಎಂದು ಪ್ರಾಚಾರ್ಯ ಡಾ. ವಿ.ಎ.ಕುಲಕರ್ಣಿ ತಿಳಿಸಿದ್ದಾರೆ.

Main Edition
Jun 8, 2024 Page No. 3

ವಿಜಯ ಕರ್ನಾಟಕ

# ಇಲೆಕ್ಟ್ರಿಕ್ ವಾಹನದ ಉತ್ಪಾದನೆ ಹೆಚ್ಚಳ



ಹಳಿಯಾಳದ ವಿಡಿಐಟಿ ವಿದ್ಯಾಲಯದಲ್ಲಿ ಇಲೆಕ್ಟ್ರಿಕ್ ವಾಹನಗಳ ಕುರಿತ ಕಾರ್ಯಾಗಾರವನ್ನು ಗಣಪತಿ ಸೋಡಿಗದ್ದೆ ಉದ್ಘಾಟಿಸಿದರು.

**ವಿಕ ಸುದ್ದಿಲೋಕ** ಹಳಿಯಾಳ

ಕೆಎಲ್ಎಸ್ ಸಂಸ್ಥೆಯ ವಿಡಿಐಟಿ ವಿದ್ಯಾಲಯದಲ್ಲಿ ಇಲೆಕ್ಟ್ರಿಕ್ ವಾಹನ ಕುರಿತು ಕಾರ್ಯಗಾರ ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಈಜೋನ್ ಸಂಸ್ಥೆಯ ಮಾಲೀಕ ಗಣಪತಿ ಸೋಡಿಗದ್ದೆ ಮಾತನಾಡಿ, ಮುಂದಿನ 10 ವರ್ಷಗಳಲ್ಲಿ ಭಾರತವು ಸಂಪೂರ್ಣವಾಗಿ ಇಲೆಕ್ಟ್ರಿಕ್ ವಾಹನವನ್ನು ಬಳಸುವ ಗುರಿ ಹೊಂದಿದೆ. ಇಲೆಕ್ಟ್ರಿಕ್ ವಾಹನ ಬಳಕೆ ಪ್ರಮಾಣ ಅಧಿಕಗೊಳಿಸಿ ಭಾರತವನ್ನು ಕಚ್ಚಾ ತೈಲ ಆಮದು ಮುಕ್ತ ರಾಷ್ಟ್ರವನ್ನಾಗಿ ಮಾಡಬೇಕಾಗಿದೆ.

ದಿನದಿಂದ ದಿನಕ್ಕೆ ಭಾರತದಲ್ಲಿ ಇಲೆಕ್ಟ್ರಿಕ್ ವಾಹನದ ಉತ್ಪಾದನೆ ಹಾಗೂ ಮಾರಾಟ ಹೆಚ್ಚುತ್ತಿದ್ದು ಕಚ್ಚಾ ತೈಲದ ಆಮದು ಪ್ರಮಾಣ ಇಳಿಕೆ ಆಗಲಿದೆ.ಇಲೆಕ್ಟ್ರಿಕಲ್, ಇಲೆಕ್ಟ್ರಾನಿಕ್ಸ್ ಮತ್ತು ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇಲೆಕ್ಟ್ರಿಕ್ ವಾಹನ ತಯಾರಿಕಾ ಸಂಸ್ಥೆಗಳಲ್ಲಿ ವಿಪುಲ ಅವಕಾಶಗಳಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ ವಿದ್ಯಾರ್ಥಿಗಳು ಇಲೆಕ್ಟ್ರಿಕ್ ವಾಹನದ ಕುರಿತ ಪ್ರಮಾಣಿಕೃತ ಕೋರ್ಸ್ ಮಾಡಿಕೊಂಡು ಉದ್ಯೋಗಾವಕಾಶ ಗಳಿಸಿಕೊಳ್ಳುವಂತೆ ಸೂಚಿಸಿದರು. ಪ್ರಾಚಾರ್ಯ ಡಾ.ವಿ.ಎ ಕುಲಕರ್ಣಿ ಉಪಸ್ಥಿತರಿದ್ದರು.

ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ ವಿಭಾಗದ ಮುಖ್ಯಸ್ಥ ಪ್ರೊ.ಅಲ್ಲಮಪ್ರಭು ಕೊಳಕಿ ಸ್ವಾಗತಿಸಿದರು. ಆವಿಷ್ಕಾರ ಪರಿಷತ್ತಿನ ಅಧ್ಯಕ್ಷ ಡಾ.ಮಹೇಂದ್ರ ದೀಕ್ಷಿತ್ ಮತ್ತು ಪ್ರೊ. ರವೀಂದ್ರ ಮೋಟೇಕರ್ ಕಾರ್ಯಕ್ರಮ ಸಂಯೋಜಿಸಿದ್ದರು. ವೈಷ್ಣವಿ ಅಂಬಡಗಟ್ಟಿ ನಿರೂಪಿಸಿ, ವಂದಿಸಿದರು.

ಮಹಾವಿದ್ಯಾಲಯದ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ವಿಭಾಗ ಹಾಗೂ ಆವಿಷ್ಕಾರ ಪರಿಷತ್ತು ಕಾರ್ಯಕ್ರಮ ಆಯೋಜಿಸಿದ್ದವು.

# ಎಲೆಕ್ಟ್ರಿಕ್ ವಾಹನ ಕುರಿತು ಕಾರ್ಯಾಗಾರ ಯಶಸ್ವಿ




**ನುಡಿಜೇನು ವರದಿ**

**ಹಳಿಯಾಳ:** ಎಲೆಕ್ಟ್ರಿಕ್ ವಾಹನ ಬಳಕೆ ಪ್ರಮಾಣ ಅಧಿಕಗೊಳಿಸಿ ಭಾರತವನ್ನು ಕಚ್ಚಾ ತೈಲ ಆಮದು ಮುಕ್ತ ರಾಷ್ಟವನ್ನು ಮಾಡೋಣ ಎಂದು ಗಣಪತಿ ಸೋಡಿಗದ್ದೆ ಹೇಳಿದರು.

ಕೆಎಲ್‌ಎಸ್ ವಿಡಿಐಟಿ ಎಲೆಕ್ಟ್ರಿಕ್ ವಾಹನ ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರಿನ ಈಜೋನ್ ಸಂಸ್ಥೆಯ ಮಾಲಿಕ ಗಣಪತಿ ಸೋಡಿಗದ್ದೆ ಆಗಮಿಸಿದ್ದರು. ಮುಂದಿನ 10 ವರ್ಷಗಳಲ್ಲಿ ಭಾರತವು ಸಂಪೂರ್ಣವಾಗಿ ಎಲೆಕ್ಟ್ರಿಕ್ ವಾಹನವನ್ನು ಬಳಸುವ ಗುರಿ ಹೊಂದಿದೆ ಎಂದು ಹೇಳಿದರು.

ದಿನದಿಂದ ದಿನಕ್ಕೆ ಭಾರತದಲ್ಲಿ ಎಲೆಕ್ಟ್ರಿಕ್ ವಾಹನದ ಉತ್ಪಾದನೆ ಹಾಗೂ ಮಾರಾಟ ಹೆಚ್ಚಾಗುತ್ತಿದ್ದು, ಕಚ್ಚಾ ತೈಲದ ಆಮದು ಪ್ರಮಾಣವನ್ನು ಇಳಿಕೆ ಮಾಡಲಿದೆ ಎಂದು ಹೇಳಿದರು.

ಇಲೆಕ್ಟ್ರಿಕಲ್, ಇಲೆಕ್ಟ್ರಾನಿಕ್ಸ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇಲೆಕ್ಟ್ರಿಕ್ ವಾಹನ ತಯಾರಿಕಾ ಸಂಸ್ಥೆಗಳಲ್ಲಿ ವಿಪುಲ ಅವಕಾಶಗಳಿವೆ ಎಂದು ಹೇಳಿದರು. ಮೂಲತಃ ಭಟ್ಕಳ್ ದವರಾದ ಗಣಪತಿ ಅವರು ಎಲೆಕ್ಟ್ರಿಕ್ ವಾಹನ ಕ್ಷೇತ್ರದಲ್ಲಿನ ತಮ್ಮ 22 ವರ್ಷಗಳ ಸುದೀರ್ಘ ಅನುಭವವನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

ಅಧ್ಯಕ್ಷತೆವಹಿಸಿ ಮಾತನಾಡಿದ ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ ವಿದ್ಯಾರ್ಥಿಗಳು ಎಲೆಕ್ಟ್ರಿಕ್ ವಾಹನದ ಕುರಿತಾದ ಪ್ರಮಾಣೀಕೃತ ಕೋರ್ಸ್ ಮಾಡಿಕೊಂಡು ಉದ್ಯೋಗಾವಕಾಶ ಗಳಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ ವಿಭಾಗದ ಮುಖ್ಯಸ್ಥ ಪ್ರೊ.ಅಲ್ಲಮಪ್ರಭು ಕೊಳಕಿ ಸ್ವಾಗತಿಸಿದರು. ಆವಿಷ್ಕಾರ ಪರಿಷತ್ತಿನ ಅಧ್ಯಕ್ಷ ಡಾ.ಮಹೇಂದ್ರ ದೀಕ್ಷಿತ್ ಮತ್ತು ಪ್ರೊ.ರವೀಂದ್ರ ಮೋಟೇಕರ್ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ವೈಷ್ಣವಿ ಅಂಬಡಗಟ್ಟಿ ನಿರೂಪಿಸಿ ವಂದಿಸಿದರು.

ಮಹಾವಿದ್ಯಾಲಯದ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ವಿಭಾಗ ಹಾಗೂ ಆವಿಷ್ಕಾರ ಪರಿಷತ್ತು ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 70ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಲೆಕ್ಟ್ರಿಕ್ ವಾಹನ ಕ್ಷೇತ್ರದಲ್ಲಿನ ಆಧುನಿಕ ಬದಲಾವಣೆಗಳು ಹಾಗೂ ಅವಕಾಶಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲು ಈ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು ಎಂದು ಪ್ರಾಚಾರ್ಯ ಡಾ.ವಿ.ಎ ಕುಲಕರ್ಣಿ ತಿಳಿಸಿದ್ದಾರೆ.

ಲೋಕಧ್ವನಿ
ಸಾಮೀಪ್ಯವೇ ಆಪ್ತ

# ಎಲೆಕ್ಟ್ರಿಕ್ ವಾಹನ ಬಳಕೆ ಪ್ರಮಾಣ ಅಧಿಕಗೊಳಿಸುವುದು ಅಗತ್ಯ

## ಕಚ್ಚಾ ತೈಲ ಆಮದು ಮುಕ್ತ ಭಾರತ ಮಾಡೋಣ ಕಾರ್ಯಾಗಾರದಲ್ಲಿ ಗಣಪತಿ ಸೋಡಿಗದ್ದೆ ಹೇಳಿಕೆ

**ಹಳಿಯಾಳ:** ಎಲೆಕ್ಟ್ರಿಕ್ ವಾಹನ ಬಳಕೆ ಪ್ರಮಾಣ ಅಧಿಕಗೊಳಿಸಿ ಭಾರತವನ್ನು ಕಚ್ಚಾ ತೈಲ ಆಮದು ಮುಕ್ತ ರಾಷ್ಟ್ರವನ್ನು ಮಾಡೋಣ ಎಂದು ಬೆಂಗಳೂರಿನ ಈಜೋನ್ ಸಂಸ್ಥೆಯ ಮಾಲಿಕ ಗಣಪತಿ ಸೋಡಿಗದ್ದೆ ಹೇಳಿದರು.

ಇಲ್ಲಿನ ಕೆಎಲ್ಎಸ್ ವಿಡಿಐಟಿಯಲ್ಲಿ ಶುಕ್ರವಾರ ಜರುಗಿದ ಎಲೆಕ್ಟ್ರಿಕ್ ವಾಹನ ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಮುಂದಿನ 10 ವರ್ಷಗಳಲ್ಲಿ ಭಾರತವು ಸಂಪೂರ್ಣವಾಗಿ ಎಲೆಕ್ಟ್ರಿಕ್ ವಾಹನವನ್ನು ಬಳಸುವ ಗುರಿ ಹೊಂದಿದೆ. ದಿನದಿಂದ ದಿನಕ್ಕೆ ಭಾರತದಲ್ಲಿ ಎಲೆಕ್ಟ್ರಿಕ್ ವಾಹನದ ಉತ್ಪಾದನೆ ಹಾಗೂ ಮಾರಾಟ ಹೆಚ್ಚಾಗುತ್ತಿದ್ದು, ಕಚ್ಚಾ ತೈಲದ ಆಮದು ಪ್ರಮಾಣವನ್ನು ಇಳಿಕೆ ಮಾಡಲಿದೆ ಎಂದು ಹೇಳಿದರು. ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇಲೆಕ್ಟ್ರಿಕ್ ವಾಹನ ತಯಾರಿಕಾ ಸಂಸ್ಥೆಗಳಲ್ಲಿ ವಿಫುಲ ಅವಕಾಶಗಳಿವೆ ಎಂದು ಹೇಳಿದರು.

ಮೂಲತಃ ಭಟ್ಕಳದವರಾದ ಗಣಪತಿ ಅವರು ಎಲೆಕ್ಟ್ರಿಕ್ ವಾಹನ ಕ್ಷೇತ್ರದಲ್ಲಿನ ತಮ್ಮ 22 ವರ್ಷಗಳ ಸುದೀರ್ಘ ಅನುಭವವನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ ವಿದ್ಯಾರ್ಥಿಗಳು ಎಲೆಕ್ಟ್ರಿಕ್ ವಾಹನದ ಕುರಿತಾದ ಪ್ರಮಾಣಿಕೃತ ಕೋರ್ಸ್ ಮಾಡಿಕೊಂಡು ಉದ್ಯೋಗಾವಕಾಶ ಗಳಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.



ಹಳಿಯಾಳದ ಕೆಎಲ್ಎಸ್ ವಿಡಿಐಟಿಯಲ್ಲಿ ಜರುಗಿದ ಕಾರ್ಯಾಗಾರದಲ್ಲಿ ಗಣಪತಿ ಸೋಡಿಗದ್ದೆ ಮಾತನಾಡಿದರು.

ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ ವಿಭಾಗದ ಮುಖ್ಯಸ್ಥ ಪ್ರೊ. ಅಲ್ಲಮಪ್ರಭು ಕೊಳಕಿ ಸ್ವಾಗತಿಸಿದರು. ಆವಿಷ್ಕಾರ ಪರಿಷತ್ತಿನ ಅಧ್ಯಕ್ಷರಾದ ಡಾ. ಮಹೇಂದ್ರ ದೀಕ್ಷಿತ್ ಮತ್ತು ಪ್ರೊ. ರವೀಂದ್ರ ಮೋಟೇಕರ್ ಕಾರ್ಯಕ್ರಮ ಸಂಯೋಜಿಸಿದ್ದರು. ವೈಷ್ಣವಿ ಅಂಬಡಗಟ್ಟಿ ನಿರೂಪಿಸಿ ವಂದಿಸಿದರು.

ಮಹಾವಿದ್ಯಾಲಯದ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ವಿಭಾಗ ಹಾಗೂ ಆವಿಷ್ಕಾರ ಪರಿಷತ್ತು ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 70ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಲೆಕ್ಟ್ರಿಕ್ ವಾಹನ ಕ್ಷೇತ್ರದಲ್ಲಿನ ಆಧುನಿಕ ಬದಲಾ ವಣೆಗಳು ಹಾಗೂ ಅವಕಾಶಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲು ಈ ಕಾರ್ಯಗಾರ ಆಯೋಜಿಸಲಾಗಿತ್ತು ಎಂದು ಪ್ರಾಚಾರ್ಯ ಡಾ. ವಿ.ಎ.ಕುಲಕರ್ಣಿ ತಿಳಿಸಿದ್ದಾರೆ.

Main Edition
Jun 8, 2024 Page No. 3